ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಬೇಕೆಂದು ದಿನಾಂಕ 19-2-2001ರಂದು ಸರ್ಕಾರವು ಸ್ಪಷ್ಟೀಕರಣ ನೀಡಿತು. ಈ ಸ್ಪಷ್ಟೀಕರಣದನ್ವಯ ಅತೀ ಹೆಚ್ಚು ಮತ ಕ್ಷೇತ್ರವನ್ನು ಹೊಂದಿರತಕ್ಕ ತಿಕೋಟ ಮತಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರೆ ಅಧ್ಯಕ್ಷತೆ ವಹಿಸಬೇಕೆಂಬ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಿಜಾಪುರ ಇವರ ನಿರ್ದೇಶನದನ್ವಯ 19-3-2001 ರಂದು ಸಭೆ ಕರೆಯಲಾಗಿತ್ತು. ಆ ನಂತರ ಉಳಿದ ಸಭೆಗಳನ್ನು ಕರೆಯಲು ಸದರಿ ಶಾಸಕರಿಗೆ ಮೌಖಿಕವಾಗಿ ಕೋರಲಾಯಿತು. ಆದರೆ ದಿನಾಂಕ ಹೊಂದಾಣಿಕೆಯಾಗದ್ದರಿಂದ ಸಭೆ ಕರೆಯಲಾಗಲಿಲ್ಲವೆಂದು ಸದರಿ ತ್ರೈಮಾಸಿಕ ಪರಿಶೀಲನಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬಿಜಾಪುರ ತಾಲ್ಲೂಕು ಇವರು ತಿಳಿಸಿದ್ದಾರೆ.

ಈ. ಹೌದು.

ಉ. ಯಾರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆ.ಡಿ.ಪಿ. ಸಭೆಯನ್ನು ಜರುಗಿಸಬೇಕು ಎಂಬುದರ ಬಗ್ಗೆ ವಿವರಣೆ ನೀಡಿದ್ದಾಗ್ಯೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಬಿಜಾಪುರ ತಾಲ್ಲೂಕು ಇವರು ಸಭೆ ಕರೆದಿರುವುದಕ್ಕೆ ಸೂಕ್ತ ವಿವರಣೆ ನೀಡಲು ಅವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಮಾಡಲಾಗಿದೆ ಮತ್ತು ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಲು ನಿರ್ದೇಶನ ನೀಡಲಾಗಿದೆ.

ನಬಾರ್ಡ್ ಯೋಜನೆಯಡಿ ಇಟ್ಟಂಗಿಹಾಳ- ಲೋಹಗಾಂವ- ಸಿದ್ಧಾಪೂರ (ಕೆ), ತಿಕೋಟಾ ರಸ್ತೆ ಬಗ್ಗೆ

914 (1172) - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಬಾರ್ಡ್ ಯೋಜನೆಯಡಿ ಇಟ್ಟಂಗಿಹಾಳ- ಲೋಹಗಾಂವ-ದಾಧರಗಿ-ಸಿದ್ಧಾಪುರ(ಕೆ)-ತಿಕೋಟಾ ರಸ್ತೆ ನಿರ್ಮಿಸಿರುವುದು ಸರ್ಕಾರಕ್ಕೆ ಗೊತ್ತಿದೆಯೇ, ಈ ರಸ್ತೆಯನ್ನು ಯಾವಾಗ ನಿರ್ಮಿಸಲಾಯಿತು?

ಆ. ಇದಕ್ಕಾಗಿ ಮಂಜೂರಾದ ಹಣ ಎಷ್ಟು? ಖರ್ಚು ಮಾಡಲಾದ ಹಣ ಎಷ್ಟು?

ಇ. ಈ ರಸ್ತೆಯ ಮೇಲೆ ತಗ್ಗುಗಳು ಬಿದ್ದಿದ್ದು ರಸ್ತೆ ಕೆಲ ಭಾಗ ಕೊಚ್ಚಿ ಹೋಗಿದ್ದು ಸರ್ಕಾರಕ್ಕೆ ತಿಳಿದುಬಂದಿದೆಯೇ.

ಈ. ಈ ರಸ್ತೆಯು ಯಾವ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿದೆ.

ಉ. ಹಾಗಿದ್ದರೆ, ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು, ಕೈಕೊಳ್ಳದಿದ್ದಲ್ಲಿ, ಕಾರಣಗಳೇನು, ಯಾವಾಗ ದುರಸ್ತಿಗೊಳಿಸಲಾಗುವುದು, ನಿರ್ದಿಷ್ಟ ಕಾಲ ಮಿತಿ ತಿಳಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಇಟ್ಟಂಗಿಹಾಳ ಲೋಹಗಾಂವ ಧನ್ನರಗಿ ರತ್ನಾಪುರ ತಾಜಾಪುರ ಧನ್ಯಾಳ ನಿಡೋಣಿ ಹಳ್ಳಿ ರಸ್ತೆಯನ್ನು ನಬಾರ್ಡ್ ಆರ್‌ಐಡಿಎಫ್-3ರಡಿ ಕೈಗೊಂಡು ದಿನಾಂಕ 31-3-2001ರಲ್ಲಿ ಪೂರ್ಣಗೊಳಿಸಲಾಗಿದೆ.

ಆ. ಈ ಕಾಮಗಾರಿಗೆ ರೂ. 229 ಲಕ್ಷ ಮೊತ್ತದ ಅಂದಾಜು ಮಂಜೂರಾಗಿದ್ದು, ಒಟ್ಟಾರೆ ರೂ. 221.62 ಲಕ್ಷ ವೆಚ್ಚ ಮಾಡಲಾಗಿದೆ.

ಇ. ಈ ರಸ್ತೆಯಲ್ಲಿದ್ದ ತಗ್ಗುಗಳನ್ನು ಮುಚ್ಚಿ ದುರಸ್ತಿಗೊಳಿಸಿದ್ದು ಇನ್ನು ಮುಂದೆ ಈ ರಸ್ತೆಯ ನಿರ್ವಹಣೆ ಮಾಡುವಂತೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ದಿನಾಂಕ 6-7-2002 ರಲ್ಲಿ ತಿಳಿಸಲಾಗಿದೆ.

ಈ. ಈ ರಸ್ತೆಯು ಹಳ್ಳಿ ರಸ್ತೆಯಾಗಿರುವುದರಿಂದ ಇದನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿದೆ.

ಉ. ಸದರಿ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ದುರಸ್ತಿಗೊಳಿಸಲಾಗಿದೆ.

ಉದ್ಭವಿಸುವುದಿಲ್ಲ.

ಧಾರ್ಮಿಕ ದತ್ತಿ ಇಲಾಖಾ ಅಧಿನಿಯಮ ರಾಷ್ಟ್ರಪತಿಗಳ ಒಪ್ಪಿಗೆ

915 (405) - ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಧಾರ್ಮಿಕ ದತ್ತಿ ಇಲಾಖಾ ಅದಿನಿಯಮ 1999 ರಾಷ್ಟ್ರಪತಿಗಳ ಒಪ್ಪಿಗೆಯಾಗಿ ಬಂದಿದೆಯೇ? ಬಂದಿದ್ದರೆ, ಯಾವಾಗ ಒಪ್ಪಿಗೆ ನೀಡಲಾಯಿತು?

2. ರಾಷ್ಟ್ರಪತಿಗಳ ಒಪ್ಪಿಗೆ ಪಡೆದ ನಂತರವೂ ಇದುವರೆವಿಗೂ ಜಾರಿಗೆ ನೀಡದಿರಲು ಕಾರಣಗಳೇನು?

3. ಎಂದಿನಿಂದ ಜಾರಿ ಕೊಡಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1. ಹೌದು. ದಿನಾಂಕ 25-10-2001 ರಂದು ರಾಷ್ಟ್ರಪತಿಗಳು ಒಪ್ಪಿಗೆ ನೀಡಿರುತ್ತಾರೆ.

2. ಈ ಕಾಯ್ದೆಗೆ ಅನುಗುಣವಾಗಿ ನಿಯಮಗಳನ್ನು ರೂಪಿಸಬೇಕಾಗಿದ್ದರಿಂದ ಜಾರಿಗೆ ನೀಡಲು ಸಾಧ್ಯವಾಗಿಲ್ಲ.

3. ನಿಯಮಗಳನ್ನು ರಚಿಸಲಾಗುತ್ತಿದ್ದು, ಶೀಘ್ರದಲ್ಲಿಯೇ ಜಾರಿಗೆ ಕೊಡಲಾಗುವುದು.

ಬೀದರ್ ಜಿಲ್ಲೆಗೆ ಎಸ್.ಆರ್.ನಲ್ಲಿ ಬಿಡುಗಡೆಯಾದ ಹಣ

916 (1033) - ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೀದರ್ ಜಿಲ್ಲೆಗೆ ಎಸ್.ಆರ್. ನಲ್ಲಿ ಬಂದಿರುವ ಅನುದಾನವೆಷ್ಟು; ಕಳೆದ ಮೂರು ವರ್ಷಗಳಿಂದ ಬಾಲ್ಕಿ ತಾಲ್ಲೂಕಿಗೆ ಬಿಡುಗಡೆಯಾದ ಎಸ್.ಆರ್. ಅನುದಾನ (3054 non plan) ಎಷ್ಟು.

ಆ. ಎಸ್.ಆರ್. ಮಂಜುರಾತಿಗಿಂತ ಕಡಿಮೆ ಹಣ ಪಾವತಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರಗಳನ್ನು ನೀಡುವುದು)

ಇ. ಬಾಲ್ಕಿ ತಾಲ್ಲೂಕು ಹೊರತುಪಡಿಸಿ ಬೇರೆ ತಾಲ್ಲೂಕುಗಳಿಗೆ ಅನುದಾನ ಹೆಚ್ಚು ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?